# ॥ ಅಯುತಚಂಡೀ ಮಹಾಯಾಗ ॥

ಈ ಜಗತ್ತಿನಲ್ಲಿರುವ ಪ್ರತಿಯೊಬ್ಬ ಮನುಷ್ಯನೂ ನಾನು ಸುಖವಾಗಿರಬೇಕು. ನನಗೆ ದುಃಖವು ಬೇಡ ಅಂದುಕೊಳ್ಳುತ್ತಿರುತ್ತಾನೆ. ಅಂತಹ ಸುಖವು ಭಗವದಾರಾಧನೆಯಿಂದ ಲಭಿಸುತ್ತದೆ ಎಂದು ಶಾಸ್ತ್ರಗಳು ನಮಗೆ ಉಪದೇಶಿಸುತ್ತವೆ. ವಾಸ್ತವವಾಗಿ ಭಗವಂತನು ನಿರ್ಗುಣನೂ ನಿರಾಕಾರನೂ ಆಗಿದ್ದರೂ ತನ್ನ ಮಾಯಾಶಕ್ತಿಯಿಂದ ಭಕ್ತರನ್ನನುಗ್ರಹಿಸಲು ಶಿವ ಗಣಪತಿ ವಿಷ್ಣು ದುರ್ಗಾ ಮೊದಲಾದ ಅನೇಕ ರೂಪಗಳನ್ನು ಧರಿಸಿರುತ್ತಾನೆ. ಭಕ್ತರು ತಮ್ಮ ಇಚ್ಛೆಗೆ ಅನುಗುಣವಾಗಿ ಒಂದು ರೂಪದಲ್ಲಿ ಆ ಪರಮಾತ್ಮನನ್ನು ಪೂಜಿಸುತ್ತಾರೆ.

ನಮ್ಮ ಸನಾತನ ಧರ್ಮದಲ್ಲಿ ತಾಯಿಗೆ ಮಹತ್ವಪೂರ್ಣವಾದ ಸ್ಥಾನ ನೀಡಿದ್ದಾರೆ. ಶ್ರುತಿಯು "ಮಾತೃದೇವೋ ಭವ" ತಾಯಿಯನ್ನು ದೇವರು ಎಂದು ಭಾವಿಸು ಎಂದು ಉಪದೇಶಿಸುತ್ತದೆ. ಹೀಗಿರುವಾಗ ಸಕಲ ಚರಾಚರಜಗತ್ತಿಗೆ ತಾಯಿಯಾದ ದೇವಿಯನ್ನುಪಾಸನೆ ಮಾಡುವುದರಿಂದ ನಮ್ಮ ಕಷ್ಟಗಳೆಲ್ಲವೂ ದೂರವಾಗಿ ನಾವು ಸುಖಶಾಂತಿಗಳಿಂದ ಇರುತ್ತೇವೆ. ಪೂಜೆ ಜಪ ಪಾರಾಯಣ ಮೊದಲಾದವುಗಳು ಆ ದೇವಿಯ ಉಪಾಸನಾಂಗವಾಗಿವೆ. ಆ ದೇವಿಯ ಮಹಿಮೆಯು ದೇವೀಭಾಗವತ, ಬ್ರಹ್ಮಾಂಡಪುರಾಣ, ಸ್ಕಾಂದಪುರಾಣ, ಮಹಾಭಾರತ ಮೊದಲಾದ ಇತಿಹಾಸ ಪುರಾಣಗಳಲ್ಲಿ ವಿಸ್ತೃತವಾಗಿ ವರ್ಣಿತವಾಗಿದ್ದರೂ ಮಾರ್ಕಂಡೇಯ ಪುರಾಣೋಕ್ತವಾದ ದುರ್ಗಾಸಪ್ತಶತಿಗೆ ತನ್ನದೇ ಆದ ವೈಶಿಷ್ಟ್ಯವಿದೆ. ಡಾಮರಾದಿ ತಂತ್ರಗ್ರಂಥಗಳಲ್ಲಿ ಈ ಚಂಡೀಸಪ್ತಶತಿಯ ಮಹಿಮೆಯು ವರ್ಣಿತವಾಗಿದೆ. ಈ ಸಪ್ತಶತೀಸ್ತೋತ್ರದ ಪಾರಾಯಣದಿಂದ ಸಕಲ ಕಷ್ಟಗಳೂ ನಿವಾರಣೆಯಾಗುತ್ತವೆ, ಸಕಲರೋಗಗಳೂ ನಿವಾರಣೆಯಾಗುತ್ತವೆ, ಸಕಲಾಭೀಷ್ಟಗಳೂ ಸಿದ್ಧಿಸುತ್ತವೆ. ಆದ್ದರಿಂದ ಈ ಸ್ತೋತ್ರವನ್ನು ಪಠಿಸಬೇಕು.

ಈ ಸಪ್ತಶತೀ ಸ್ತೋತ್ರದಲ್ಲಿ ಪ್ರಥಮ – ಮಧ್ಯಮ – ಉತ್ತಮ ಎಂದು ಮೂರು ಚರಿತ್ರೆಗಳಿವೆ. ಪ್ರಥಮಚರಿತ್ರೆಯಲ್ಲಿ ಬಂಧು ಪರಿವಾರ ಜನಗಳಿಂದ ತಿರಸ್ಕೃತರಾಗಿ ಅರಣ್ಯದಲ್ಲಿ ಸಂಚರಿಸುತ್ತಾ ತಮ್ಮ ಕಷ್ಟಗಳ ಪರಿಹಾರಕ್ಕಾಗಿ ಋಷಿಯನ್ನು ಪ್ರಾರ್ಥಿಸಿದ ಸುರಥ ಸಮಾಧಿ ಎಂಬ ರಾಜ ಮತ್ತು ವೈಶ್ಯರಿಗೆ ಋಷಿಯಿಂದ ದೇವಿಯ ಸ್ವರೂಪವರ್ಣನೆ, ಮತ್ತು ದೇವಿಯಿಂದ ಮಧುಕೈಟಭರೆಂಬ ರಾಕ್ಷಸರ ಸಂಹಾರವು ವರ್ಣಿತವಾಗಿದೆ. ದ್ವಿತೀಯ ಚರಿತ್ರೆಯಲ್ಲಿ ಮಹಾಲಕ್ಷ್ಮಿಯ ಉತ್ಪತ್ತಿ ಮತ್ತು ಸೈನ್ಯಸಮೇತನಾದ ಮಹಿಷಾಸುರನ ವಧೆ, ದೇವತೆಗಳಿಂದ ಅಮ್ಮನವರ ಸ್ತುತಿ ದೇವಿಯು ಇಂದ್ರಾದಿ ದೇವತೆಗಳಿಗೆ ವರವನ್ನು ನೀಡಿರುವ ಕಥೆ ವರ್ಣಿಸಲ್ಪಟ್ಟಿದೆ. ಉತ್ತಮ ಚರಿತ್ರೆಯಲ್ಲಿ ಶುಂಭ ಮೊದಲಾದ ದುಷ್ಟ ದೈತ್ಯರಿಂದ ಪೀಡಿತರಾದ ದೇವತೆಗಳು ತಮ್ಮ ಕಷ್ಟಗಳನ್ನು ನಿವಾರಿಸಲು ತಾಯಿಯನ್ನು ಪ್ರಾರ್ಥಿಸಿದಾಗ ತಾಯಿಯು ಧೂಮ್ರಲೋಚನ ಚಂಡ–ಮುಂಡದೈತ್ಯರನ್ನು ಸಂಹರಿಸುವುದು, ದೇವಿಯ ಶರೀರದಿಂದ ಬ್ರಾಹ್ಮೀ ಮಾಹೇಶ್ವರಿ ಮೊದಲಾದ ಶಕ್ತಿಗಳು ಆವಿರ್ಭವಿಸುವುದು, ರಕ್ತಬೀಜಾಸುರ, ನಿಶುಂಭ ಮತ್ತು ಶುಂಭಾಸುರನ ವಧೆ, ದೇವತೆಗಳು ದೇವಿಯನ್ನು ಸ್ತುತಿಸುವುದು ದೇವಿಯು ದೇವತೆಗಳಿಗೆ ವರವನ್ನು ನೀಡುವುದು ಸುರಥ ಮತ್ತು ಸಮಾಧಿ ಎಂಬುವವರು ದೇವಿಯನ್ನಾರಾಧಿಸುವುದು ಪ್ರಸನ್ನಳಾದ ದೇವಿಯು ಪ್ರತ್ಯಕ್ಷಳಾಗಿ ರಾಜನಿಗೆ ರಾಜ್ಯವನ್ನೂ ವೈಶ್ಯನಿಗೆ ಜ್ಞಾನವನ್ನನುಗ್ರಹಿಸುವುದು ವರ್ಣಿತವಾಗಿದೆ. ಈ ಸಪ್ತಶತಿಯು ಹದಿಮೂರು ಅಧ್ಯಾಯ ಗಳಿಂದ ಕೂಡಿದೆ. ಇಂತಹ ಸಪ್ತಶತಿಯನ್ನು ಕಾಮನೆಗಳಿಗೆ ಅನುಸಾರವಾಗಿ ಒಂದು, ಹತ್ತು, ನೂರು, ಸಾವಿರ ಬಾರಿ ಪಾರಾಯಣ

© 2011 by Sri Sringeri Sharada Peetham http://www.sringeri.net

ಮಾಡಬಹುದೆಂದು ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿದೆ. ಆ ವಿಧಿಯು ನವಚಂಡೀ ಶತಚಂಡೀ ಸಹಸ್ರಚಂಡೀ ಎಂದು ಕರೆಯಲ್ಪಡುತ್ತದೆ.

ಸಂಸ್ಕೃತದಲ್ಲಿ "ಶಂ" ಎಂದರೆ ಒಳ್ಳೆಯದು "ಕರ" ಎಂದರೆ ಉಂಟುಮಾಡುವವನು ಎಂದು. ಲೋಕಕ್ಕೆ ಒಳ್ಳೆಯದಾಗಲಿ ಎಂದು ಸಂಕಲ್ಪಿಸಿ ಶಾರದಾಪೀಠವನ್ನು ಸ್ಥಾಪಿಸಿರುವ ಶ್ರೀಶಂಕರಾಚಾರ್ಯರ ಪರಂಪರೆಯಲ್ಲಿ ಬಂದಂತಹ ಪ್ರತಿಯೊಬ್ಬರು ಗುರುಗಳೂ ಶಂಕರರೇ . ಆದ್ದರಿಂದ ನಮ್ಮಗುರುಗಳಾದ ಶ್ರೀಶ್ರೀಭಾರತೀತೀರ್ಥಮಹಾಸ್ವಾಮಿಗಳು ಲೋಕಕ್ಷೇಮಕ್ಕಾಗಿ ಅಯುತಚಂಡೀ ಮಹಾಯಾಗವನ್ನು ನೆರವೇರಿಸಲು ಸಂಕಲ್ಪಿಸಿರುತ್ತಾರೆ. ಅಯುತ ಎಂದರೆ ಹತ್ತುಸಾವಿರ ಎಂದು ಅರ್ಥ. ಸುಮಾರು ಒಂದುಸಾವಿರಕ್ಕೂ ಹೆಚ್ಚಿನ ವಿದ್ವಾಂಸರಿಂದ ಐದುದಿನಗಳ ಕಾಲ ದಿನಕ್ಕೆ ಎರಡು ಪಾರಾಯಣಗಳಂತೆ ಒಟ್ಟು ಹತ್ತುಸಾವಿರಪಾರಾಯಣಗಳು ಮತ್ತು ಚಂಡಿಕಾ ನವಾಕ್ಷರೀ ಮಂತ್ರದ ಒಂದು ಕೋಟಿ ಜಪ ನಡೆಯುತ್ತದೆ. ಆರನೇದಿನ ಒಂದುನೂರು ಹೋಮಕುಂಡಗಳಲ್ಲಿ ಏಕ ಕಾಲದಲ್ಲಿ "ಪ್ರತಿ ಶ್ಲೋಕಂ ಚ ಜುಹುಯಾತ್ ಪಾಯಸಂ ತಿಲಸರ್ಪಿಷಾ" ಎಂಬ ಶಾಸ್ತ್ರವಚನದಂತೆ ಪಾಯಸದ್ರವ್ಯದಿಂದ ಹೋಮವು ನಡೆಯುತ್ತದೆ. ನೂತನವಾಗಿ ಮಾಡಿಸಲ್ಪಟ್ಟ ಶ್ರೀಚಂಡಿಕಾ ಪರಮೇಶ್ವರಿಯ ವಿಗ್ರಹಕ್ಕೆ ಮತ್ತು ಯಂತ್ರಕ್ಕೆ ಪುರಶ್ಚರಣಾಂಗವಾಗಿ ಪ್ರಧಾನಾಚಾರ್ಯರಿಂದ ಪ್ರತಿದಿನವೂ ಕಲ್ಪೋಕ್ತಪ್ರಕಾರ ಆವರಣ ಪೂಜೆ, ಪಂಚಾಮೃತಾಭಿಷೇಕ, ಸಹಸ್ರನಾಮಾರ್ಚನೆ ಮೊದಲಾದವುಗಳು ಸಾಯಂಕಾಲ ಮಹಾನೀರಾಜನಾನಂತರ ಅಷ್ಟಾವಧಾನ ಸೇವೆಗಳೂ ನೆರವೇರಿಸಲ್ಪಡುತ್ತವೆ.

ಇಂತಹ ಅಪೂರ್ವವಾದ ಕಾರ್ಯಕ್ರಮದಲ್ಲಿ ಯಥಾಶಕ್ತಿ ಸೇವೆಯನ್ನು ಸಲ್ಲಿಸಿ ಜಗನ್ಮಾತೆಯ ಹಾಗೂ ಶ್ರೀಶ್ರೀಜಗದ್ಗುರು ಮಹಾಸ್ವಾಮಿಗಳವರ ಅನುಗ್ರಹಕ್ಕೆ ಪಾತ್ರರಾಗೋಣ.

❑❑

© 2011 by Sri Sringeri Sharada Peetham http://www.sringeri.net 